ಎದುರುಬದುರಾಗಿ ಇಬ್ಬರು ಕುಳಿತುಕೊಂಡಿದ್ದಾರೆ. ಬೆಂಕಿಯ ಬೆಳಕಲ್ಲಿ ಅವರಿಬ್ಬರ ಬೆತ್ತಲೆ ದೇಹಗಳು ಮಿನುಗುತ್ತಿವೆ. ಒಬ್ಬನಿಗೆ ಸುಮಾರು ನಲವತ್ತೈದರ ಪ್ರಾಯ. ಶರೀರ ಬಡಕಲಾಗಿದೆ. ಅಸ್ಥಿಪಂಜರಕ್ಕೆ ಹೋಲಿಸಬಹುದು. ತಲೆಯ ಕೂದಲಲ್ಲಿ ಕೆಲವು ಕಪ್ಪು ಮತ್ತು ಕೆಲವು ಬಿಳಿಯ ಬಣ್ಣದ್ದು. ಮತ್ತೊಬ್ಬ ಯುವಕ. ಇಪ್ಪತ್ತರೊಳಗೆ ಅವನ ಪ್ರಾಯ. ಕಟ್ಟುಮಸ್ತಾದ ದೇಹ. ಬಣ್ಣ ಮಾತ್ರ ಕಡು ಕಪ್ಪು. ಅವರಿಬ್ಬರ ಕತ್ತಿನಲ್ಲಿ ತಲೆಯ ಬುರುಡೆಗಳ ಹಾರ ಇದೆ. ಹಣೆಯಲ್ಲಿ ರಕ್ತದ ತಿಲಕ. ಇಬ್ಬರೂ ಮಂತ್ರ ಹೇಳುತ್ತಿದ್ದಾರೆ. ಇಬ್ಬರೂ ಕೈಕರಣ ಮಾಡುತ್ತಿದ್ದಾರೆ.

ಗುರು ಮತ್ತು ಶಿಷ್ಯ. ರುದ್ರನಾಗ ಮತ್ತು ಮದಂತ. ಮಾಂತ್ರಿಕ ವಿದ್ಯೆಯನ್ನು ಕಲಿಯಲು ಬಂದು ಈಗಾಗಲೇ ಎಂಟು ವರ್ಷಗಳು ಕಳೆದಿವೆ. ಅಂದರೆ ಮದಂತ ತನ್ನ ಹನ್ನೆರಡನೆಯ ವಯಸ್ಸಿನಲ್ಲಿಯೇ ಸಾಧನೆ ಪ್ರಾರಂಭಿಸಿದ್ದನು. ಈಗ ಕೊನೆಯ ಹಂತ.

ಮಾಟದಿಂದ ಕ್ಷಿತ ಪ್ರಯೋಗದ ತನಕ ಇಪ್ಪತ್ತನಾಲ್ಕು ವಿದ್ಯೆಗಳು ವಾಮಚಾರದಲ್ಲಿವೆ. ಕೇವಲ ಎಂಟು ವರ್ಷದ ಅವಧಿಯಲ್ಲಿ ಎಲ್ಲವನ್ನೂ ಕಲಿಯಲು ಸಾಧ್ಯವಿಲ್ಲ. ಗುರು ಮಾಂತ್ರಿಕ ರುದ್ರನಾಗ ತಾನು ಕಲಿತಿರುವುದನ್ನೆಲ್ಲಾ ಶಿಷ್ಯನಿಗೆ ಕಲಿಸುತ್ತಿದ್ದಾನೆ. ಕಲಿಕೆಯೆಲ್ಲಾ ಮುಗಿದಿದೆ. ಉಪಸಂಹಾರದ ಕೊನೆಯ ಹಂತ. ರಕ್ತತರ್ಪಣ ನೀಡಬೇಕು. ಅನಂತ ವಿಶ್ವದಲ್ಲಿ ಎಲ್ಲೋ ಅಡಗಿರುವ ಪಂಚಕ್ಷುದ್ರ ಶಕ್ತಿಗಳಿಗೆ... ಮಾಂತ್ರಿಕ ವಿದ್ಯೆಯಲ್ಲಿ ಸಾಧನೆ ಮಾಡಿ ಮೃತರಾಗಿರುವ ಗುರು ಮಾಂತ್ರಿಕರ ಪ್ರೇತಾತ್ಮಗಳಿಗೆ ಕಾಲ... ರೂಪದಲ್ಲಿರುವ ಪ್ರೇತಪಿಶಾಚಿಗಳಿಗೆ ರಕ್ತತರ್ಪಣ ನೀಡಬೇಕು. ಅದರೊಂದಿಗೆ ಶಾಕಿನಿಡಾಕಿನಿ ಮುಂತಾದ ಅರವತ್ತನಾಲ್ಕು ಯೋಗಿನಿಯರನ್ನು ಆಹ್ವಾನಿಸಿ ಅಪಸವ್ಯ ಮಾರ್ಗದಿಂದ ತೃಪ್ತಿಪಡಿಸಬೇಕು. ನಂತರವೇ ಶಿಷ್ಯ ತನ್ನ ಗುರುವಿನ ಅನುಮತಿ ಪಡೆದು ಸ್ವತಂತ್ರನಾಗಬೇಕು.

ಮಾಂತ್ರಿಕ ಮದಂತ ಒಂಟಿ ಕಾಲಿನಲ್ಲಿ ನಿಂತು ಮಂತ್ರ ಹೇಳುತ್ತಿದ್ದಾನೆ. ಎರಡೂ ಕೈಗಳನ್ನು ಮೇಲೆತ್ತಿದ್ದಾನೆ. ಮುಖ ಈಗ ಅನಂತ ಆಕಾಶದ ಕಡೆ ಇದೆ. ಆವಾಹನೆಯ ಮಂತ್ರ. ಪಂಚಕ್ಷುದ್ರ ಶಕ್ತಿಗಳು! ಗುರು... ಕಾಲ... ಕಾಪಾಲ... ಚಂಡ... ರಕ್ತೋದರ... ಪರಮ ದುಷ್ಟ ಕ್ಷುದ್ರಶಕ್ತಿಗಳು. ಗುರು ಸಹಮಂತ್ರ ಹೇಳುತ್ತಿದ್ದಾನೆ. ಮಂತ್ರದ ಕೊನೆಯ ಚರಣ. ಪ್ರಕೃತಿ ಹುಚ್ಚೆದ್ದು ಕುಣಿಯುತ್ತಿದೆಯೇನೋ ಎಂಬ ಭ್ರಮೆ. ಇಡೀ ಸ್ಮಶಾನದಲ್ಲಿ ಕಂಪನ. ಭಯಂಕರ ಅಟ್ಟಹಾಸ. ತಂಪಾಗಿ ಬೀಸುತ್ತಿದ್ದ ತಣ್ಣನೆಯ ಗಾಳಿ ಈಗ ಬಿರುಗಾಳಿಯಾಗಿ ಬದಲಾಯಿತು. 'ಬರೋ' ಎಂದು ನುಗ್ಗುತ್ತಿದೆ.

ಲಟಲಟ ಎಂಬ ಶಬ್ದ. ಮರದ ಕೊಂಬೆಗಳು ಮುರಿಯುತ್ತಿವೆ. ಸುಂಟರಗಾಳಿಯಿಂದಾಗಿ ಮಣ್ಣು ಮತ್ತು ತರಗೆಲೆಗಳು ನೆಲದಿಂದ ಕೆಲವು ಅಡಿಗಳು ಮೇಲೆ ಎದ್ದು ಗಿರಗಿರನೆ ತಿರುಗುತ್ತಿವೆ. ಗುರು ಮಾಂತ್ರಿಕ ಈಗ ಕೋಳಿ ಮತ್ತು ಕುರಿಗಳ ಕತ್ತನ್ನು ಕತ್ತರಿಸುತ್ತಿದ್ದಾನೆ. ರಕ್ತ ಹನಿ ಹನಿಯಾಗಿ ಬೀಳುತ್ತಿದೆ. ಎದೆಯಲ್ಲಿ ನಡುಕ ಉಂಟಾಗುವಂತೆ ಒಮ್ಮೆಲೆ ಹತ್ತಾರು ಸಿಡಿಲುಗಳು ಬಡಿದಂತೆ ಶಬ್ದವಾಯಿತು. ಸ್ಮಶಾನ ಗಿರಗಿರನೆ ತಿರುಗುತ್ತಿದೆ.

ಪಂಚ ಶಕ್ತಿಗಳ ಆಗಮನ. ಪ್ರಚಂಡ ವೇಗ. ಆಗಸದಲ್ಲಿ ಕ್ಷಣಕಾಲ ಕಂಡು ಕೂಡಲೇ ಅದೃಶ್ಯವಾಯಿತು ಕೆಂಪು ಜ್ವಾಲೆ. ಆ ಜ್ವಾಲೆ ಪೊರಕೆಯಾಕಾರದಲ್ಲಿತ್ತು. ಅಗೋಚರ ರೂಪದಲ್ಲಿರುವ ಇನ್ನಿತರ ಪ್ರೇತಪಿಶಾಚಿಗಳು ರಕ್ತಕ್ಕಾಗಿ ಹಾತೊರೆಯುತ್ತಿವೆ. ಕೆಲವು ನಿಮಿಷಗಳ ಕಲರವ.

ರಕ್ತತರ್ಪಣ ಮುಗಿಯಿತು. ಆಹ್ವಾನಿಸಿದ್ದ ಶಕ್ತಿಗಳನ್ನು ಉಪಸಂಹರಿಸಿದ ಕೂಡಲೇ ಪ್ರಶಾಂತತೆ ನೆಲೆಸಿತು. ಈಗ ಈ ಸ್ಮಶಾನದಲ್ಲಿ ಸೂಜಿ ಬಿದ್ದರೂ ಸಹ ಕೇಳುವಂತಹ ನಿಶ್ಶಬ್ದತೆ ಆವರಿಸಿದೆ. ಎಂಟು ವರ್ಷಗಳ ಕಾಲ ತನಗೆ ವಾಮಾಚಾರ ವಿದ್ಯೆಯನ್ನು ಕಲಿಸಿದ ಗುರು ಮಾಂತ್ರಿಕನಿಗೆ, ಮದಂತ ಮಾಂತ್ರಿಕ ಪದ್ಧತಿಯಲ್ಲಿ ನಮಸ್ಕಾರ ಮಾಡಿದನು. ವಾಮಾಚಾರ ಅನ್ನುವುದು ಪರಮ ಪವಿತ್ರವಾದ ವಿದ್ಯೆ. ಇದನ್ನು ಲೋಕದ ಕಲ್ಯಾಣಕ್ಕೆ ಬಳಸಬೇಕು. ಸ್ವಾರ್ಥ... ದುರಾಸೆ... ವೈಯಕ್ತಿಕ ಸೇಡಿಗಾಗಿ ಇದನ್ನು ಬಳಸಬಾರದು. ವಿದ್ಯೆಯನ್ನು ಕಲಿಸಿದ ನಂತರ ಗುರು ಮಾಂತ್ರಿಕ ಈ ರೀತಿ ಉಪದೇಶ ಮಾಡಿ ಶಿಷ್ಯನಿಗೆ ಎಚ್ಚರಿಕೆಯನ್ನು ನೀಡಬೇಕು. ಆದರೆ ಇಲ್ಲಿ ಅದು ತದ್ವಿರುದ್ಧವಾಗಿದೆ. ಗುರು ಮಾಂತ್ರಿಕ ಏನು ಹೇಳುತ್ತಿದ್ದಾನೆ ಅಂತ ಕೇಳಿ. ಗುರು ಮಾಂತ್ರಿಕ ರುದ್ರನಾಗನ ಮುಖ ಬೆಂಕಿಯ ಬೆಳಕಲ್ಲಿ ವಿಚಿತ್ರ ಕಾಂತಿಯಿಂದ ಮಿನುಗುತ್ತಿದೆ. ರುದ್ರನಾಗ ಗಂಭೀರವಾಗಿ 'ಮದಂತ... ಮಾಂತ್ರಿಕನಿಗೆ ಮುಖ್ಯವಾಗಿ ಅನುಕಂಪ ಇರಬಾರದು, ಸಂಬಂಧಸ್ನೇಹದ ಭಾವುಕತೆ ಇರಬಾರದು. ಮಾಂತ್ರಿಕ ಪ್ರತಿಯೊಂದು ವಿಚಾರದಲ್ಲಿಯೂ ನಿರ್ಲಿಪ್ತನಾಗಿರಬೇಕು. ಮನಸ್ಸು ನಿರ್ವಿಕಾರವಾಗಿರಬೇಕು.'

ಮದಂತ ಶ್ರದ್ಧೆಯಿಂದ ಕೇಳುತ್ತಿದ್ದಾನೆ. ರುದ್ರನಾಗ 'ಇಡೀ ಸಮಾಜದ ಜನತೆ ನಿನಗೆ ಗೌರವ ಕೊಡಬೇಕು. ನಿನ್ನನ್ನು ಕಂಡ ಕೂಡಲೇ ಭಯದಿಂದ ದೂರ ಸರಿಯಬೇಕು. ನೀನು ನಿನ್ನ ಮಾಂತ್ರಿಕ ಶಕ್ತಿಯ ಪ್ರದರ್ಶನ ಮಾಡಬೇಕು'.

ಮದಂತ ಬೆಚ್ಚಿಬಿದ್ದ. ಏಕೋ ಮುಜುಗರ ಆಗುತ್ತಿದೆ. ಮನಸ್ಸು ಇದನ್ನು ಒಪ್ಪುತ್ತಿಲ್ಲ. ರುದ್ರನಾಗ 'ಕೆಲವು ವರ್ಷಗಳ ಹಿಂದೆ ಒಂದು ಹೊತ್ತು ಊಟ ಮಾಡಲು ಸಹ ನನಗೆ ಗತಿ ಇರಲಿಲ್ಲ. ಯಾಕೆ ಅಂದರೆ ಬಂಗಾರದ ಮೊಟ್ಟೆ ಇಡುವ ಈ ವಿದ್ಯೆಯನ್ನು ನಾನು ಸರಿಯಾಗಿ ಉಪಯೋಗಿಸಿರಲಿಲ್ಲ. ನನಗೆ ಆಗ ಬದುಕುವ ರೀತಿ ಗೊತ್ತಿರಲಿಲ್ಲ. ಯಾವುದೋ ಒಂದು ಸಂದರ್ಭದಲ್ಲಿ ನನಗೆ ಬದುಕು ಪಾಠ ಕಲಿಸಿತು. ಮಾಂತ್ರಿಕ ವಿದ್ಯೆ ಭಾಗ್ಯ ದೇವತೆಯಾಯಿತು. ನನ್ನ ತಂಗಿಗೆ ನಗರದ ಗಂಡನ್ನು ಹುಡುಕಿ ಅದ್ದೂರಿಯಿಂದ ಮದುವೆ ಮಾಡಿದ್ದೇನೆ. ನನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಸುಖ ಮತ್ತು ಸಂತೃಪ್ತ ಜೀವನ ನಡೆಸುತ್ತಿದ್ದೇನೆ ನಾನು. ಎಂಟು ವರ್ಷಗಳಿಂದ ನಾನು ಬದುಕುತ್ತಿರುವ ರೀತಿಯನ್ನು ನೀನು ನೋಡುತ್ತಿದ್ದೀಯ ಅಲ್ಲವೆ?'

ಮದಂತ ತಲೆಯಾಡಿಸಿದನು. ಗುರು ಮಾಂತ್ರಿಕ ರುದ್ರನಾಗನನ್ನು ಹುಡುಕಿಕೊಂಡು ಹತ್ತಾರು ಊರುಗಳಿಂದ ಜನರು ಬರುತ್ತಿದ್ದರು. ದುಡ್ಡಿನ ಪಿಶಾಚಿ ರುದ್ರನಾಗ. ಮಾಟ, ಅಂಗಕ್ಷೀಣ ವಿದ್ಯೆ, ಚಂಡಿಕ, ಹಸ್ತಚಂಡಿಕ ಮತ್ತು ಭಯಂಕರ ವಿದ್ಯೆ ವಾರಿಣಿ ಪ್ರಯೋಗವನ್ನು ಸಹ ದುಡ್ಡಿಗಾಗಿ ಮಾಡುತ್ತಿದ್ದನು. ತನ್ನ ಪ್ರಯೋಗ ಯಾರ ಮೇಲೆ ಎಂದು ವಿಚಾರಿಸುತ್ತಿರಲಿಲ್ಲ. ದುಡ್ಡು ಬಂದರೆ ಸರಿ. ಮದಂತನಿಗೆ ತನ್ನ ಗುರುವಿನ ಬಗ್ಗೆ ಮೊದಲಿನಿಂದಲೂ ಸಹ ಅಸಮಾಧಾನ ಇತ್ತು. ಆದರೆ ಅದನ್ನು ವ್ಯಕ್ತಪಡಿಸಲು ಸಾಧ್ಯವೆ?

ಮಾಂತ್ರಿಕ ವಿದ್ಯೆಯನ್ನು ಕಲಿತಿರುವ ಗುರು ಮಾಂತ್ರಿಕನಿಗೆ ಗುರು ಕಾಣಿಕೆ ನೀಡಬೇಕು. ಮದಂತ 'ಗುರುಗಳೇ... ತಮಗೇನು ಗುರು ಕಾಣಿಕೆ ಕೊಡಲಿ?'

ರುದ್ರನಾಗ ಶಿಷ್ಯನನ್ನು ಕ್ಷಣಕಾಲ ನೋಡಿದ ನಂತರ 'ಕೇಳುತ್ತೇನೆ... ಖಂಡಿತಾ ಗುರುದಕ್ಷಿಣೆಯನ್ನು ಕೇಳಿ ಪಡೆಯುತ್ತೇನೆ. ಆದರೆ ಈಗಲ್ಲ. ನನಗೆ ಅಗತ್ಯ ಕಂಡು ಬಂದಾಗ ಕೇಳುತ್ತೇನೆ.'

ಎಲ್ಲೋ ಅಪಶಕುನದ ಆಲಾಪನೆ ಪ್ರಾರಂಭವಾಯಿತು. ದೂರದಲ್ಲಿ ನಾಯಿಯೊಂದು ವಿಕಾರ ಸ್ವರದಲ್ಲಿ ಬೊಗಳುತ್ತಿದೆ. ಪ್ರತಿಯೊಂದನ್ನೂ ಸಹ ಸ್ವಂತ ಲಾಭದ ದೃಷ್ಟಿಯಿಂದ ನೋಡುವ ರುದ್ರನಾಗ, ಎಂಟು ವರ್ಷಗಳು ಕಲಿಸಿರುವಾಗ ಅದಕ್ಕೆ ತಕ್ಕ ಪ್ರತಿಫಲವನ್ನು ಶಿಷ್ಯನಿಂದ ನಿರೀಕ್ಷಿಸುತ್ತಿದ್ದಾನೆ.

ಬೆಳಗಿನ ಎಂಟು ಗಂಟೆಯ ಸಮಯ. ಮಾವಿನ ಗಿಡಗಳಿಗೆ ನೀರನ್ನು ಬಿಡುತ್ತಿದ್ದ ತುಂಗಮ್ಮನಿಗೆ ಕಂಡು ಬಂದಿತು ಆ ದೃಶ್ಯ. ತಲೆಯ ತುಂಬಾ ಮಲ್ಲಿಗೆ ಮತ್ತು ಕನಕಾಂಬರ ಹೂವನ್ನು ಮುಡಿದು ಆರು ಮಂದಿ ಮುತ್ತೈದೆಯರು ಈಗ ಎದುರು ಮನೆಗೆ ಹೋಗುತ್ತಿದ್ದಾರೆ. ಅಂದು ಮಂಗಳಗೌರಿ ವ್ರತ. ಪೂಜೆಗಾಗಿ ಮುತ್ತೈದೆಯರು ಹೋಗುತ್ತಿದ್ದಾರೆ. ತುಂಗಮ್ಮ ಸಹ ಮುತ್ತೈದೆ. ಆದರೆ ಆಕೆಯನ್ನು ಆ ಊರಿನವರ್ಯಾರೂ ಪೂಜೆಗೆ ಕರೆದು ಬಾಗಿನ ಕೊಡುತ್ತಿರಲಿಲ್ಲ. ತುಂಗಮ್ಮ ಮಾಂತ್ರಿಕನ ಹೆಂಡತಿ.

ದೆವ್ವವನ್ನು ಆರಾಧಿಸುವವನ ಮಡದಿ. ತುಂಗಮ್ಮ ಆಗಲಿ ಅವಳ ಇಬ್ಬರು ಮಕ್ಕಳಾಗಲಿ ಊರಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಅಸ್ಪೃಶ್ಯರಂತೆ ಇದ್ದರು. ತುಂಗಮ್ಮ ಮಂಕು ಬಡಿದವರಂತೆ ಹೂವಿನ ಗಿಡಗಳ ನಡುವೆ ನಿಂತುಕೊಂಡಿದ್ದಾಳೆ. ನಲವತ್ತೆರಡರ ಪ್ರಾಯ ಇರಬಹುದು. ತುಸು ಸ್ಥೂಲ ಶರೀರ. ಗೌರವ ವರ್ಣದ ದೇಹ. ಅಲ್ಲಲ್ಲಿ ಬೆಳ್ಳಿ ಕೂದಲುಗಳಿವೆ. ತುಂಗಮ್ಮ ಈಗ ನಿಟ್ಟುಸಿರನ್ನು ಚೆಲ್ಲಿದಳು. ಎಂತಹ ಬದುಕು ತನ್ನದು!

ಮನೆಯ ಅಂಗಳದಲ್ಲಿ ತುಳಸಿ ಗಿಡ ಬೆಳೆಯುವ ಹಾಗಿಲ್ಲ. ಪೂಜಿಸಲು ಬೃಂದಾವನ ಇಲ್ಲ. ಈ ಮನೆಯಲ್ಲಿ ದೇವರೇ ಇಲ್ಲ. ಒಂದೇ ಒಂದು ಫೋಟೊ ಸಹ ಇಲ್ಲ. ಆ ಮನೆಯ ಮುಂಭಾಗದ ಹಾಲ್‌ನಲ್ಲಿ ತಲೆಯ ಬುರುಡೆ ಇದೆ. ಗುರು